ARCHDIOCESE OF BANGALORE
Archbishop's House, No. 75 Miller's Road, Benson Town Post, Bengaluru-560 046
KARNATAKA, INDIA. Tel.: 91+(080) 23330438 / 23330838 / 23339199
Archdiocese of Bangalore Archdiocese of Bangalore Bangalore Archdiocese

**Most Rev. Peter Machado**
Archbishop of Bangalore

E-mail: archbishop@bangalorearchdiocese.com
archbishop@bangalorearchdiocese.org
Web. : www.bangalorearchdiocese.org

Ref. No.:

Dated: 19.11.2021

**Shri. Basavaraja Bommai,**
Hon'ble Chief Minister.
3rd Floor, Vidhana Saudha,
Bangalore – 560 001

Dear Sir,

**Sub.: Requesting not to table the Anti-conversion Bill and to take back the orders on the survey of Christian Missionaries and the establishments.**

1. The entire Christian Community in Karnataka opposes the proposal of Anti-Conversion Bill in one voice and questions the need for such an exercise when sufficient laws and court directives are in place to monitor any aberration of the existing laws. The Indian Constitution Article 25 very clearly says, "Freedom of conscience and free profession, practice and propagation of religion subject to public order, morality and health." Further, Article 26 says that all denominations can manage their own affairs in matters of religion. And, therefore, introducing such laws would infringe the rights of the citizens, especially of the minority communities.
2. The Backward Classes and Minorities Welfare Department of Government of Karnataka have issued an order to conduct a survey of both official and non-official Christian Missionaries and the Institutions and Establishments functioning in the State. When all the relevant data is already available (through the census) with the Government, why do we need yet another futile exercise? Why only Christian community is targeted and marked for this arbitrary, fallacious and illogical move? What is the motive that is driving them to do so?
3. Thousands of schools, colleges and hospitals are run and managed by Christian Community across the State. When lakhs of students are graduating from these institutions year after year and thousands of patients irrespective of caste, creed and colour receive the best medical attention from our hospitals and care centers, let the Government prove that even one of them has ever been influenced, compelled or coerced to change his or her religion. Moreover, anti-conversion bill would become a tool for the fringe elements to take law into their own hands and vitiate the atmosphere with communal unrest in the otherwise peaceful State.

Hence, we strongly appeal to the goodwill of the Chief Minister and the Cabinet not to promote such an undesirable and discriminatory bill in the interest of the peace and harmony in the society.

**+ Most Rev. Dr. Peter Machado,**
Archbishop, Archdiocese of Bangalore
President, All Karnataka United Christian Forum for Human Rights (AKUCFHR)
President, Karnataka Region Catholic Bishops' Council (KRCBC)

# ARCHDIOCESE OF BANGALORE

Archbishop's House, No. 75 Miller's Road, Benson Town Post, Bengaluru-560 046
KARNATAKA, INDIA. Tel.: 91+(080) 23330438 / 23330838 / 23339199
Archdiocese of Bangalore  Archdiocese of Bangalore  Bangalore Archdiocese

**Most Rev. Peter Machado**
Archbishop of Bangalore

E-mail: archbishop@bangalorearchdiocese.com
archbishop@bangalorearchdiocese.org
Web. : www.bangalorearchdiocese.org


17.10.2021

Ref. No.:

ರವರಿಗೆ–,
ಶ್ರೀ ಬಸವರಾಜ್ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನಸೌಧ, 3ನೇ ಮಹಡಿ,
ಡಾ. ಅಂಬೇಡ್ಕರ್ ವೀದಿ,
ಬೆಂಗಳೂರು – 560 001

**ವಿಷಯ: ಕರ್ನಾಟಕ ಸರ್ಕಾರ ಜಾರಿಗೆ ತರಲಿಚ್ಛಿಸುವ ಮತಾಂತರ ನಿಷೇಧ ಕಾಯ್ದೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಆದೇಶಿಸಿರುವ ಕ್ರೈಸ್ತ ಸಮುದಾಯದ ಚರ್ಚುಗಳು ಮತ್ತು ಸಂಘ–ಸಂಸ್ಥೆಗಳ ಗಣತಿಯ ಕುರಿತು.**

1. ರಾಜ್ಯದಲ್ಲಿ ಮತಾಂತರದ ಕುರಿತ ಚರ್ಚೆ ಬಹಳ ಬಿರುಸಿನಿಂದ ಇತ್ತೀಚೆಗೆ ನಡೆಯುತ್ತಿದೆ. ಸರ್ಕಾರವು 'ಮತಾಂತರ ನಿಷೇಧ ಕಾಯ್ದೆ'ಯನ್ನು ಜಾರಿಗೊಳಿಸಲು ಚಿಂತನೆ ನಡೆಸುತ್ತಿದೆ. ಇದಕ್ಕೆ ಕರ್ನಾಟಕದ ಸಮಸ್ತ ಕ್ರೈಸ್ತ ಸಮುದಾಯವು ಒಮ್ಮನಿಸಿನಿಂದ ವಿರೋಧಿಸುತ್ತದೆ. ಈಗಾಗಲೇ ನಮ್ಮ ಸಂವಿಧಾನವು ತನ್ನ ಪ್ರಜೆಗಳಿಗೆ ಯಾವುದೇ ಧರ್ಮವನ್ನು ಪ್ರತಿಪಾದಿಸಲು, ಆಚರಿಸಲು ಮತ್ತು ಅದನ್ನು ಪ್ರಕಟಿಸಲು ಹಕ್ಕುಗಳನ್ನು ನೀಡಿದೆ. ಹೀಗಿರುವಲ್ಲಿ ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆಯ ಅಗತ್ಯವಾದರೂ ಏನು? ಯಾವುದೋ ಒಂದೆರಡು ಘಟನೆಗಳನ್ನು ಆಧಾರವಾಗಿಟ್ಟುಕೊಂಡು, ಇಡೀ ಕ್ರೈಸ್ತ ಸಮುದಾಯವನ್ನು ದೂರುವುದು ಸರಿಯಲ್ಲ.

2. ಇನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ತನ್ನ ಸಭೆಯೊಂದರಲ್ಲಿ ರಾಜ್ಯದಲ್ಲಿನ ಕ್ರೈಸ್ತ ಸಮುದಾಯದ ಚರ್ಚುಗಳ ಮತ್ತು ಧಾರ್ಮಿಕ ಸಂಘ–ಸಂಸ್ಥೆಗಳ ಗಣತಿಯನ್ನು ನಡೆಸಬೇಕೆಂದು ಆದೇಶಿಸಿದೆ. ಈ ಗಣತಿಯ ಉದ್ದೇಶವಾದರೂ ಏನು? ಸರ್ಕಾರವು ಗಣತಿ ಮಾಡಬೇಕೆಂದರೆ ಮಾಡಲಿ. ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ನಮ್ಮ ಸಮುದಾಯವನ್ನು ಮಾತ್ರ ಗುರಿಯಾಗಿಸಿ ಗಣತಿಯನ್ನು ನಡೆಸಲು ಆದೇಶಿಸಿರುವುದೇಕೆ? ಅದಲ್ಲದೆ, ನಮ್ಮ ಚರ್ಚುಗಳ ವಿವರಗಳೆಲ್ಲವೂ ಈಗಾಗಲೇ ಸರ್ಕಾರದ ಬಳಿ ಇರುವಾಗ ಮತ್ತೊಮ್ಮೆ ಗಣತಿ ನಡೆಸುವ ಅಗತ್ಯವಾದರೂ ಏನು? ಭಾರತದ ಮೊದಲ ಜನಗಣತಿಯಿಂದ ಇಲ್ಲಿಯವರೆಗೂ ಸಹ ದೇಶದಲ್ಲಿ ಕ್ರೈಸ್ತ ಸಮುದಾಯದ ಜನಸಂಖ್ಯೆಯ ಅಂಕಿ–ಅಂಶಗಳು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಬಳಿ ಇವೆ. ಭಾರತದಲ್ಲಿ ದೊಡ್ಡ ಮಟ್ಟಿಗೆ ಮತಾಂತರ ನಡೆಯುತ್ತಿದೆ ಎಂದು ಆರೋಪಿಸುವವರು ಈ ಅಂಕಿ–ಅಂಶಗಳನ್ನು ಒಮ್ಮೆ ಪರಿಶೀಲಿಸಿದರೆ ಎಲ್ಲರಿಗೂ ಸತ್ಯಾಂಶವು ಅರಿವಾಗುವುದು. ಮತಾಂತರವು ನಿಜವೇ ಆಗಿದ್ದರೆ, ನಮ್ಮ ಸಮುದಾಯದ ಸಂಖ್ಯೆ ಇಷ್ಟೊತ್ತಿಗೆ ಅಧಿಕವಾಗಿರಬೇಕಿತ್ತು. ಆದರೆ, ದೇಶದ ಸ್ವಾತಂತ್ರ್ಯದ ನಂತರವೂ ಸಹ ಜನಸಂಖ್ಯೆಯಲ್ಲಿ ನಮ್ಮ ಸಮುದಾಯದ ಸಂಖ್ಯೆ ಕೇವಲ ಶೇ. 1.8 ರಷ್ಟು ಮಾತ್ರವಿದೆ.

ಮುಂದುವರೆದಿದೆ...

3. ಇಂದು ನಮ್ಮ ರಾಜ್ಯ ಹಾಗೂ ರಾಷ್ಟ್ರದಲ್ಲಿ ಕ್ರೈಸ್ತ ಸಮುದಾಯವು ಸಾವಿರಾರು ಶಾಲಾ ಕಾಲೇಜುಗಳ ಮತ್ತು ಆಸ್ಪತ್ರೆಗಳ ಮೂಲಕ ತನ್ನ ನಿಸ್ವಾರ್ಥ ಸೇವೆಯನ್ನು ಮಾಡುತ್ತಿದೆ. ಇತಿಹಾಸದಲ್ಲಿ ಕ್ರೈಸ್ತ ಶಾಲಾ ಕಾಲೇಜುಗಳಲ್ಲಿ ಓದಿದವರು, ಅಥವಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡ ಕ್ರೈಸ್ತೇತರರಲ್ಲಿ ಯಾರಾದರೂ ಒಬ್ಬರು ತನ್ನನ್ನು ಮತಾಂತರಗೊಳಿಸಲಾಗಿದೆ ಎಂಬುದನ್ನು ಸಾಭೀತುಪಡಿಸಲಿ. ಈ ನಿಟ್ಟಿನಲ್ಲಿ ಮತಾಂತರ ನಿಷೇಧ ಕಾಯ್ದೆ ಎಂಬುದು ಜಾರಿಯಾದರೆ, ಅದು ಯಾವ ಒಳಿತನ್ನೂ ಮಾಡುವುದಿಲ್ಲ. ಬದಲಿಗೆ, ಆ ಕಾಯಿದೆ ಕೋಮುವಾದಿಗಳ ಕೈಗೆ ಸಿಕ್ಕಿ, ಅದನ್ನು ಅವರು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯವೆಸಗಲು ಸಾಧ್ಯವಾಗಬಹುದು ಮತ್ತು ಆ ಮೂಲಕ ಸಮಾಜದಲ್ಲಿ ಶಾಂತಿಯನ್ನು ಕದಡಿಸಲು ಪ್ರಯತ್ನಿಸಬಹುದು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಈ ಮೇಲಿನ ಎಲ್ಲಾ ಕಾರಣಗಳಿಂದ ಸರ್ಕಾರದ ಹಿಂದುಳಿದ ವರ್ಗಗಳ ಇಲಾಖೆಯ ಆದೇಶವನ್ನು ಹಿಂಪಡೆಯಬೇಕೆಂದು ಹಾಗೂ ಮತಾಂತರ ನಿಷೇಧ ಕಾಯ್ದೆಯ ಜಾರಿಯ ಚಿಂತನೆಯನ್ನು ಕೈಬಿಡಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಕಳಕಳಿಯಿಂದ ಕ್ರೈಸ್ತ ಸಮುದಾಯವು ವಿನಂತಿಸಿಕೊಳ್ಳುತ್ತಿದೆ.

**+ ಪರಮಪೂಜ್ಯ ಡಾ. ಪೀಟರ್ ಮಚಾದೊ**

ಆರ್ಚ್‌ಬಿಷಪ್ – ಬೆಂಗಳೂರು ಮಹಾಧರ್ಮಕ್ಷೇತ್ರ

ಅಧ್ಯಕ್ಷರು – ಕರ್ನಾಟಕ ಪ್ರಾಂತೀಯ ಕಥೋಲಿಕ ಧರ್ಮಾಧ್ಯಕ್ಷರ ಮಂಡಳಿ ಮತ್ತು

ಅಧ್ಯಕ್ಷರು – ಅಖಿಲ ಕರ್ನಾಟಕ ಕ್ರೈಸ್ತ ಮಾನವ ಹಕ್ಕುಗಳ ಒಕ್ಕೂಟ

Peter Machado
Archdiocese of Bangalore